Gmail Bldeasbkcp Sbkcp <bldeasbkcp@gmail.com>

# KSTA Kannada S&T Conference

by mail:

Kstacademy DST <ksta.gok@gmail.com> Wed, Jun 19, 2019 at 3:49 PM
To: Bldeasbkcp Sbkcp <bldeasbkcp@gmail.com>, DrGirija Nimbal <drgirija.nimbal@gmail.com>

Sir,

Greetings from KSTA!

It is proposed to organise Kannada Science and Technology Conference in association with your esteemed College in the month of November 2019. In this context, PFA scanned copy of letter and guidelines for your perusal. We have already posted hard copy of the same.

Dr. Girija and her colleagues in the Dept. of Physics have coordinated earlier programs of KSTA well. The proposed conference may be coordinated by the same team under your able guidance.

An organising committee with enthusiastic and committed faculty may be formed for organising the conference well . I am happy to inform that our previous Kannada Conferences in Mysore and Dharwad were grand success.

I request you to mail your acceptance to host the Conference.

Thanks & Regards,

Dr A M Ramesh
CEO, KSTA

Prof. U R Rao Vijnan Bhavan,
GKVK Campus, Major Sandeep Unnikrishnan Road,
Doddabettahalli Layout, Vidyaranyapura Post,
Bangalore - 560097
Ph: +91-80-29721550
Email: ksta.gok@gmail.com
Website:www.kstacademy.org
Loctation: https://goo.gl/maps/cq8h1ZF5aVPVaEaGA

*"Every 3000 Sheets of Papers cost us a tree, So think twice before you print this page" - Go Green*

**2 attachments**

- **Gaidelines .pdf**
  145K
- **Covering Ltr .pdf**
  42K

IQAC, Co-ordinator
S.B.Arts & K.C.P.Science College,
Vijayapur.

Principal
S. B. Arts & KCP Sc. College
Bijapur.

S.B.Arts & K.C.P. Sc. College ... Inward No. ........ 19/6/19 ........

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಕ ವಿ ತಂ ಅ

KSTA

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜು ಆವರಣ, ಜಿ.ಕೆ.ವಿ.ಕೆ.,

ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ಜಿ.ಕೆ.ವಿ.ಕೆ.,

ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-560097

ದೂರವಾಣಿ : 080-29721550, email: ksta.gok@gmail.com website: www.kstacademy.in


15ನೇ ಜೂನ್ 2019

ಕವಿತಂಅ/ಸಮ್ಮೇಳನ/2019-20

ಮಾನ್ಯರೇ,

ವಿಷಯ : ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ತಮ್ಮ ಕಾಲೇಜಿನ ಸಹಯೋಗದೊಂದಿಗೆ ಆಯೋಜಿಸಲು ಸಮ್ಮತಿಯನ್ನು ಸೂಚಿಸುವ ಬಗ್ಗೆ

******

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇದರ ಅಂಗಸಂಸ್ಥೆಯಾಗಿ 2005ರ ಜುಲೈನಲ್ಲಿ ಸ್ಥಾಪಿಸಲಾಗಿದ್ದು, ಕಳೆದ ಸುಮಾರು 14 ವರ್ಷಗಳಿಂದ ವಿಜ್ಞಾನ ಶಿಕ್ಷಣವನ್ನು ಸದೃಢಗೊಳಿಸುವ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವ ಹಾಗೂ ಜನಸಾಮಾನ್ಯರಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಯಶಸ್ವಿಯಾಗಿ ಆಯೋಜಿಸಿಕೊಂಡು ಬರುತ್ತಿದ್ದು, ಅವುಗಳಲ್ಲಿ ಅಕಾಡೆಮಿಯ ಕನ್ನಡ ಸಮ್ಮೇಳನವು ಸಹ ಒಂದು ಪ್ರಮುಖ ಕಾರ್ಯಕ್ರಮವಾಗಿದೆ.

2019-20ನೇ ಆರ್ಥಿಕ ವರ್ಷದಲ್ಲಿ ಅಕಾಡೆಮಿಯು ವಿಜಯಪುರದಲ್ಲಿ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ತಮ್ಮ ಕಾಲೇಜಿನ ಸಹಯೋಗದೊಂದಿಗೆ 2019ರ ನವೆಂಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಿದೆ. ಸಮ್ಮೇಳನದ ಕೇಂದ್ರ ವಿಷಯಕ್ಕೆ ಸಂಬಂಧಪಟ್ಟಂತೆ ಎರಡ್ಮೂರು ವಿಷಯಗಳನ್ನು ಆಯ್ಕೆ ಮಾಡಿ, ಕೇಂದ್ರ ವಿಷಯಕ್ಕೆ ಸಂಬಂಧಪಟ್ಟಂತೆ ಕನ್ನಡದಲ್ಲಿ ಹೆಸರಾಂತ ವೈಜ್ಞಾನಿಕ ಸಂಸ್ಥೆಗಳ ವಿಶೇಷ ಪರಿಣತ ಸಂಪನ್ಮೂಲ ತಜ್ಞರುಗಳನ್ನು ಗುರುತಿಸಿ, ಅಕಾಡೆಮಿಗೆ ಕಳುಹಿಸಿ ಕೊಡುವುದು. ಇದಲ್ಲದೆ, ಸಮ್ಮೇಳನಕ್ಕೆ ಪೂರಕವಾಗಿ ಮೂರು ವಿಚಾರ ಸಂಕಿರಣ ಮತ್ತು ಒಂದು ಕವಿಗೋಷ್ಠಿಯನ್ನು ಸಹ ನಡೆಸುವುದು.

ಸದರಿ ಸಮ್ಮೇಳನದ ಪ್ರತಿನಿಧಿಗಳಾಗಿ ಸುತ್ತಮುತ್ತಲ ಜಿಲ್ಲೆಗಳ ಜನಸಾಮಾನ್ಯರು, ವಿವಿಧ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಉಪನ್ಯಾಸಕರು/ಪ್ರಾಧ್ಯಾಪಕರು, ಸಂಶೋಧಕರು/ ವಿಜ್ಞಾನಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಆಸಕ್ತ ವಿಜ್ಞಾನ ಪದವಿ/ ಸ್ನಾತಕೋತ್ತರ /ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ 400 ರಿಂದ 500 ಪ್ರತಿನಿಧಿಗಳನ್ನು ಆಹ್ವಾನಿಸುವುದು.

ಈ ಸಮ್ಮೇಳನದ ಆಯೋಜನೆಗೆ ಆಡಿಟೋರಿಯಂ, ವಸತಿ, ಸಾರಿಗೆ ವ್ಯವಸ್ಥೆ ಮತ್ತು ಇತರ ಮೂಲ ಸೌಲಭ್ಯಗಳ ಅಗತ್ಯವಿದ್ದು, ಅವುಗಳನ್ನು ಕಾಲೇಜಿನ ವತಿಯಿಂದ ಉಚಿತವಾಗಿ ಒದಗಿಸುವುದು ಸಮ್ಮೇಳನದ ಆಯೋಜನೆಗೆ ತಗಲುವ ಖರ್ಚುವೆಚ್ಚಗಳಿಗೆ ಅಕಾಡೆಮಿಯ ವತಿಯಿಂದ ರೂ. 07.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಅದರಲ್ಲಿ ರೂ. 4,25,000/- ಗಳನ್ನು (ನಾಲ್ಕು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ತಮ್ಮ ಕಾಲೇಜಿಗೆ ನೀಡಲಾಗುವುದು. ಇನ್ನುಳಿದ ರೂ. 2,75,000/- ಗಳನ್ನು ಅಕಾಡೆಮಿಯ ವತಿಯಿಂದ ವೆಚ್ಚ ಮಾಡಲಾಗುವುದು. ಮಾರ್ಗಸೂಚಿಯನ್ನು ಈ ಪತ್ರದ ಜೊತೆ ಲಗತ್ತಿಸಿದೆ.

ಈ ಹಿನ್ನೆಲೆಯಲ್ಲಿ ಸಮ್ಮೇಳನವನ್ನು ತಮ್ಮ ಕಾಲೇಜಿನ ಸಹಯೋಗದೊಂದಿಗೆ ತಮ್ಮ ಸಮ್ಮತಿಯನ್ನು ಹಾಗೂ ಸಮ್ಮೇಳನವನ್ನು ಸಂಘಟಿಸಲು ಸಂಯೋಜಕರೊಬ್ಬರನ್ನು ನೇಮಿಸಿ ತಿಳಿಸುವಂತೆ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ. ಎಂ. ರಮೇಶ್)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಇವರಿಗೆ:

ಪ್ರಾಂಶುಪಾಲರು

ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜು

ವಿಜಯಪುರ

ಪ್ರತಿ : ಡಾ. ಗಿರಿಜಾ ನಿಂಬಾಲ್, ಸಹ ಪ್ರಾಧ್ಯಾಪಕರು, ಭೌತ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ವಿಭಾಗ, ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜು, ವಿಜಯಪುರ

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ಜಿ.ಕೆ.ವಿ.ಕೆ.
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-೫೬೦೦೯೭
ದೂರವಾಣಿ : ೦೮೦-೨೯೭೨೧೫೫೦, email: ksta.gok@gmail.com website: www.kstacademy.in

## ಕನ್ನಡ ಸಮ್ಮೇಳನ ಆಯೋಜನೆಯ ಮಾರ್ಗಸೂಚಿ

### 1.0 ಹಿನ್ನೆಲೆ

ವಿಜ್ಞಾನ ಮತ್ತು ತಂತ್ರಜ್ಞಾನಗಳು ಜನಜೀವನದ ಒಂದು ಅವಿಭಾಜ್ಯ ಅಂಗಗಳಾಗಿ ಮನುಷ್ಯನ ಜ್ಞಾನಭಂಡಾರದ ವಿಶೇಷ ಶಾಖೆಗಳಾಗಿ ಮಾರ್ಪಟ್ಟಿವೆ. ಪ್ರಪಂಚದ ನಿಜಸ್ವರೂಪವನ್ನು ಅರ್ಥಮಾಡಿಕೊಳ್ಳುವ ಮಾನವನ ಯತ್ನದಿಂದ ವಿಜ್ಞಾನ ಹುಟ್ಟಿದೆ. ಮನುಷ್ಯನು ತನ್ನ ಸುತ್ತಮುತ್ತಲ ಪ್ರಪಂಚವನ್ನು ತನ್ನ ಸ್ವಂತ ಪ್ರಯೋಜನಕ್ಕಾಗಿ ಬಳಸಿಕೊಳ್ಳಲು ಮಾಡುವ ಯತ್ನದಿಂದ ತಂತ್ರಜ್ಞಾನ ಹುಟ್ಟಿದೆ. ತಂತ್ರಜ್ಞಾನವನ್ನು ಬೆಳೆಸುವುದು ವಿಜ್ಞಾನ; ವಿಜ್ಞಾನದ ಮುನ್ನಡೆಗೆ ಉತ್ತೇಜನ ನೀಡುವುದು ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನ ಒಂದಕ್ಕೊಂದು ಪೂರಕವಾಗಿ ಸಮಾಜದ ಶ್ರೇಯೋಭಿವೃದ್ಧಿಗೆ ಅತ್ಯಗತ್ಯವೆನಿಸಿವೆ.

ಈ ಕ್ಷೇತ್ರಗಳಲ್ಲಿನ ಆವಿಷ್ಕಾರಗಳು ಹಾಗೂ ಸಂಶೋಧನೆಗಳಿಂದ ಬದಲಾವಣೆಗಳು ಜಾಗತಿಕ ಮಟ್ಟದಲ್ಲಿ ಕ್ಷಿಪ್ರಗತಿಯಲ್ಲಿ ಆಗುತ್ತಿವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಮಾಜ ಅಭಿವೃದ್ಧಿ ಪಥದಲ್ಲಿ ಸಾಗಬೇಕಾದರೆ ತಾಂತ್ರಿಕ ಕೌಶಲ್ಯ ಮತ್ತು ವೈಜ್ಞಾನಿಕ ಸಾಮರ್ಥ್ಯಗಳನ್ನು ಬಲಪಡಿಸುವುದು ಅನಿವಾರ್ಯವಾಗಿದೆ. ಆದಕಾರಣ, ಸೂಕ್ತ ನೀತಿ ನಿರೂಪಣೆ ಮತ್ತು ಪೂರಕ ಸಾಂಸ್ಥಿಕ ವ್ಯವಸ್ಥೆಗಳನ್ನು ಸದೃಢಗೊಳಿಸಿಕೊಳ್ಳುವುದು ಅವಶ್ಯಕವಾಗಿದೆ. ಇದರಿಂದ ಪ್ರಚಲಿತ ವೈಜ್ಞಾನಿಕ ಯುಗದಲ್ಲಿ ಸುಸ್ಥಿರ ಹಾಗೂ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಹಾಗೂ ವೈಜ್ಞಾನಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಲು ಸಾಧ್ಯವಾಗುವುದು.

ನಿರಂತರ ಹಸಿರು ಕ್ರಾಂತಿ, ಆಹಾರ ಸಮಸ್ಯೆಗೆ ಪರಿಹಾರ, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆಯಿಂದ ಆರ್ಥಿಕ ಸ್ವಾವಲಂಭನೆ, ಶುದ್ಧ ನೀರಿನ ಪೂರೈಕೆ, ತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯೀಕರಣ, ಮಾಲಿನ್ಯ ನಿಯಂತ್ರಣ ಮುಂತಾದ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳ ಬಳಕೆಯಿಂದಾಗಿ ಗಮನಾರ್ಹ ಪ್ರಗತಿಯನ್ನು ಸಾಧಿಸಿ, ಜನಜೀವನದ ಗುಣಮಟ್ಟವನ್ನು ಉತ್ತಮಗೊಳಿಸಲು ಸಾಧ್ಯವಾಗಿದೆ. ಇದರಿಂದ ಆರ್ಥಿಕ ಪ್ರಗತಿಯ ಲಾಭ ಜನಸಾಮಾನ್ಯರಿಗೂ ಸಹ ದೊರಕಲು ಅನುವಾಗಿದೆ. ಆದಕಾರಣ, ಜನಸಾಮಾನ್ಯರಿಗೆ, ಉಪನ್ಯಾಸಕರಿಗೆ/ಅಧ್ಯಾಪಕರಿಗೆ, ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳಿಗೆ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಆಧುನಿಕ ಸಂಶೋಧನೆ, ಆವಿಷ್ಕಾರಗಳು ಮತ್ತು ನೂತನ ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿ, ವೈಜ್ಞಾನಿಕ ಅರಿವು ಮೂಡಿಸಲು ಅಕಾಡೆಮಿಯು ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಆಯೋಜಿಸಿಕೊಂಡು ಬರುತ್ತಿದೆ.

### 2.0 ಕಾರ್ಯಕ್ರಮದ ಉದ್ದೇಶ:

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಮ್ಮೇಳನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಹೊಸ ಸಂಶೋಧನೆ, ಮುಂಚೂಣಿಯಲ್ಲಿರುವ ವೈಜ್ಞಾನಿಕ ಕ್ಷೇತ್ರಗಳು, ರಾಜ್ಯದ ಅಭಿವೃದ್ಧಿಗೆ ಪೂರಕವಾದ ತಂತ್ರಜ್ಞಾನಗಳು ಹಾಗೂ ಇತರೆ ವೈಜ್ಞಾನಿಕ ವಿಷಯಗಳ ಬಗ್ಗೆ ವಿವಿಧ ಕ್ಷೇತ್ರಗಳ ತಜ್ಞರು,

ಪರಿಣತರು, ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರುಗಳಿಂದ ಕನ್ನಡದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು. ಈ ಸಮ್ಮೇಳನದ ಮುಖ್ಯ ಉದ್ದೇಶಗಳೆಂದರೆ:

- ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಾಗುತ್ತಿರುವ ಸಂಶೋಧನೆಗಳು ಮತ್ತು ಆವಿಷ್ಕಾರಗಳ ಬಗ್ಗೆ ಜನಸಾಮಾನ್ಯರಿಗೆ, ಶಿಕ್ಷಕರಿಗೆ, ಕಾಲೇಜು ಉಪನ್ಯಾಸಕರಿಗೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ, ಆಸಕ್ತ ವಿದ್ಯಾರ್ಥಿಗಳಿಗೆ ಮತ್ತು ವಿಜ್ಞಾನಾಸಕ್ತರಿಗೆ ಅರಿವು ಮೂಡಿಸುವುದು.
- ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ವಿವಿಧ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡುವುದು.
- ಜನಸಾಮಾನ್ಯರಲ್ಲಿ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಮೂಡಿಸುವುದು.
- ಜನಸಾಮಾನ್ಯರಲ್ಲಿ ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಅರಿವು ಮೂಡಿಸುವುದು.

## 3.0 ಸಮ್ಮೇಳನದ ಆಯೋಜನೆ :

- ಸಮ್ಮೇಳನವನ್ನು ಎರಡು ದಿನಗಳ ಕಾಲ ಆಯೋಜಿಸುವುದು
- ಈ ಸಮ್ಮೇಳನವನ್ನು ಉದ್ಘಾಟಿಸಲು ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರನ್ನು ಹಾಗೂ ತಮ್ಮ ಜಿಲ್ಲಾ ಉಸ್ತುವಾರಿ ಸಚಿವರನ್ನು, ಪ್ರಧಾನ ಭಾಷಣವನ್ನು ಮಾಡಲು ಒಬ್ಬ ಶ್ರೇಷ್ಠ ವಿಜ್ಞಾನಿಯನ್ನು ಆಹ್ವಾನಿಸುವುದು. ತಮ್ಮ ಸಂಸ್ಥೆಯ ಮುಖ್ಯಸ್ಥರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡು, ಮುಖ್ಯ ಅತಿಥಿಗಳಾಗಿ ಅಕಾಡೆಮಿ ಅಧ್ಯಕ್ಷರನ್ನು ಮತ್ತು ಸದಸ್ಯ ಕಾರ್ಯದರ್ಶಿಗಳನ್ನು ಆಹ್ವಾನಿಸುವುದು.
- ಸಮ್ಮೇಳನದ ಕೊನೆಯ ದಿನ ಸಮಾರೋಪ ಸಮಾರಂಭವನ್ನು ಏರ್ಪಡಿಸುವುದು.

## 4.0 ಸಮ್ಮೇಳನದ ವಿಷಯ ಆಯ್ಕೆ

- ಸಮ್ಮೇಳನದ ವಿಷಯವನ್ನು ಅಕಾಡೆಮಿ ಸಭೆಯಲ್ಲಿ ತೀರ್ಮಾನಿಸಲಾಗುವುದು
- ವಿಷಯ ಆಯ್ಕೆಯಾದ ನಂತರ, ವಿವಿಧ ವಿಷಯಗಳಡಿ ಕನ್ನಡದಲ್ಲಿ ಉಪನ್ಯಾಸಗಳನ್ನು ನೀಡಲು ಸಂಪನ್ಮೂಲ ತಜ್ಞರನ್ನು ಅಕಾಡೆಮಿಯಿಂದಲೇ ಗುರುತಿಸಿ, ತಲಾ ರೂ. 5000/- ಗಳಂತೆ ಗೌರವಧನವನ್ನು ಅಕಾಡೆಮಿ ವತಿಯಿಂದಲೇ ನೀಡಲಾಗುವುದು
- ಉಪನ್ಯಾಸಗಳ ಜೊತೆಗೆ 03 ವಿಚಾರಗೋಷ್ಠಿಗಳನ್ನು ಹಾಗೂ ವಿಜ್ಞಾನಕ್ಕೆ ಸಂಬಂಧಪಟ್ಟ ಒಂದು ಕವಿಗೋಷ್ಠಿಯನ್ನು ಸಹ ಏರ್ಪಡಿಸಲಾಗುವುದು. ವಿಚಾರಗೋಷ್ಠಿ ಹಾಗೂ ಕವಿಗೋಷ್ಠಿಗಳಿಗೆ ತಜ್ಞರನ್ನು ಅಕಾಡೆಮಿಯಿಂದಲೇ ಗುರುತಿಸಿ, ತಲಾ ರೂ. 2,500/- ಗಳಂತೆ ಗೌರವಧನವನ್ನು ಅಕಾಡೆಮಿ ವತಿಯಿಂದಲೇ ನೀಡಲಾಗುವುದು

From KSTA

## 4.0 ಸಮ್ಮೇಳನದ ಪ್ರತಿನಿಧಿಗಳು

- ಸಮ್ಮೇಳನದಲ್ಲಿ ವಿದ್ವತ್ ಪೂರ್ಣ ಉಪನ್ಯಾಸಗಳನ್ನು ಕನ್ನಡದಲ್ಲಿ ಖ್ಯಾತ ವಿಜ್ಞಾನಿಗಳು ಮತ್ತು ತಾಂತ್ರಿಕ ಪರಿಣತರಿಂದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಆಯೋಜಿಸುವುದು. ಸಮ್ಮೇಳನದ ಪ್ರತಿನಿಧಿಗಳನ್ನಾಗಿ ಜನಸಾಮಾನ್ಯರನ್ನು, ಸುತ್ತಮುತ್ತಲ ಜಿಲ್ಲೆಗಳ ವಿವಿಧ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಉಪನ್ಯಾಸಕರು/ ಪ್ರಾಧ್ಯಾಪಕರನ್ನು, ಸಂಶೋಧಕರು/ವಿಜ್ಞಾನಿಗಳನ್ನು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು, ಆಸಕ್ತ ಸ್ನಾತಕೋತ್ತರ & ಸಂಶೋಧನಾ ವಿದ್ಯಾರ್ಥಿಗಳನ್ನು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಸುಮಾರು 500 ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿಕೊಡುವುದು.

## 5.0 ಕನ್ನಡದಲ್ಲಿ ಪ್ರಾತ್ಯಕ್ಷಿಕೆಗಳ ಪ್ರಸ್ತುತಿ (Poster Presentation)

- ಪ್ರತಿನಿಧಿಗಳು ತಮ್ಮ ಸಂಶೋಧನಾ ಪ್ರಬಂಧಗಳನ್ನು ಕನ್ನಡದಲ್ಲಿ ಪ್ರಾತ್ಯಕ್ಷಿಕೆಗಳ ರೂಪದಲ್ಲಿ ಪ್ರಸ್ತುತ ಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಒದಗಿಸಲಿದೆ. ಪ್ರಾತ್ಯಕ್ಷಿಕೆಗಳನ್ನು ಮೂಲ ವಿಜ್ಞಾನ ಮತ್ತು ಅನ್ವಯಿಕ ವಿಜ್ಞಾನಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳನ್ನು (*research poster presentations*) ರಾಜ್ಯದ ವಿಜ್ಞಾನಿಗಳು/ಸಂಶೋಧಕರು, ಅಧ್ಯಾಪಕರು, ಇಲಾಖಾ ಪ್ರತಿನಿಧಿಗಳು ಮತ್ತು ಸ್ನಾತಕೋತ್ತರ / ಸಂಶೋಧನಾ ವಿದ್ಯಾರ್ಥಿಗಳು ಮಂಡಿಸಬಹುದಾಗಿದೆ. ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಕೆಳಕಂಡಂತೆ ನೀಡಲಾಗುವುದು:

ಪ್ರಥಮ ಬಹುಮಾನ – ರೂ.10,000/- ✓ (5000+5000)
ದ್ವಿತೀಯ ಬಹುಮಾನ – ರೂ. 7,500/- ✓
ತೃತೀಯ ಬಹುಮಾನ –ರೂ. 5,000/- ✓

- ಅಕಾಡೆಮಿಯ ಸದಸ್ಯರು ಮತ್ತು ಕಾಲೇಜಿನ ಪ್ರಾಧ್ಯಾಪಕರುಗಳನ್ನೊಳಗೊಂಡ ತಜ್ಞ ಸಮಿತಿಯು ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಸ್ವಂತಿಕೆ (*originality of research*), ವಸ್ತುನಿಷ್ಠತೆ (*objectivity*), ಉಪಯುಕ್ತತೆ (*utility to society*) ಮತ್ತು ಪ್ರಸ್ತುತಿ (*presentation*) ಇವುಗಳನ್ನು ಆಧರಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಿದೆ.
- ಪ್ರಾತ್ಯಕ್ಷಿಕೆಗಳ ಮೌಲ್ಯಮಾಪಕರಿಗೆ ತಲಾ ರೂ. 2,000/- ಗಳಂತೆ ಗೌರವಧನವನ್ನು ಹಾಗೂ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಅಕಾಡೆಮಿ ವತಿಯಿಂದಲೇ ನೀಡಲಾಗುವುದು

## 5.0 ವಿಜ್ಞಾನ ಪ್ರಸರಣದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ

- ಈ ಸಮ್ಮೇಳನದಲ್ಲಿ ರಾಜ್ಯದಲ್ಲಿ ವಿಜ್ಞಾನ ಪ್ರಸರಣ ಮತ್ತು ಸಂವಹನಕ್ಕೆ ಅನನ್ಯ ಸೇವೆಯನ್ನು ಸಲ್ಲಿಸಿರುವ ಹಿರಿಯ ವಿಜ್ಞಾನ ಬರಹಗಾರರನ್ನು ಅಕಾಡೆಮಿಯ ಸಭೆಯಲ್ಲಿ ಆಯ್ಕೆ ಮಾಡಿ, ಅವರಿಗೆ

## 4.0 ಸಮ್ಮೇಳನದ ಪ್ರತಿನಿಧಿಗಳು

- ಸಮ್ಮೇಳನದಲ್ಲಿ ವಿದ್ವತ್ ಪೂರ್ಣ ಉಪನ್ಯಾಸಗಳನ್ನು ಕನ್ನಡದಲ್ಲಿ ಖ್ಯಾತ ವಿಜ್ಞಾನಿಗಳು ಮತ್ತು ತಾಂತ್ರಿಕ ಪರಿಣತರಿಂದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಆಯೋಜಿಸುವುದು. ಸಮ್ಮೇಳನದ ಪ್ರತಿನಿಧಿಗಳನ್ನಾಗಿ ಜನಸಾಮಾನ್ಯರನ್ನು, ಸುತ್ತಮುತ್ತಲ ಜಿಲ್ಲೆಗಳ ವಿವಿಧ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳ ಉಪನ್ಯಾಸಕರು/ ಪ್ರಾಧ್ಯಾಪಕರನ್ನು, ಸಂಶೋಧಕರು/ವಿಜ್ಞಾನಿಗಳನ್ನು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು, ಆಸಕ್ತ ಸ್ನಾತಕೋತ್ತರ & ಸಂಶೋಧನಾ ವಿದ್ಯಾರ್ಥಿಗಳನ್ನು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಸುಮಾರು ೫೦೦ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿಕೊಡುವುದು.

## ೫.0 ಕನ್ನಡದಲ್ಲಿ ಪ್ರಾತ್ಯಕ್ಷಿಕೆಗಳ ಪ್ರಸ್ತುತಿ (Poster Presentation)

- ಪ್ರತಿನಿಧಿಗಳು ತಮ್ಮ ಸಂಶೋಧನಾ ಪ್ರಬಂಧಗಳನ್ನು ಕನ್ನಡದಲ್ಲಿ ಪ್ರಾತ್ಯಕ್ಷಿಕೆಗಳ ರೂಪದಲ್ಲಿ ಪ್ರಸ್ತುತ ಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಒದಗಿಸಲಿದೆ. ಪ್ರಾತ್ಯಕ್ಷಿಕೆಗಳನ್ನು ಮೂಲ ವಿಜ್ಞಾನ ಮತ್ತು ಅನ್ವಯಿಕ ವಿಜ್ಞಾನಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳನ್ನು (*research poster presentations*) ರಾಜ್ಯದ ವಿಜ್ಞಾನಿಗಳು/ಸಂಶೋಧಕರು, ಅಧ್ಯಾಪಕರು, ಇಲಾಖಾ ಪ್ರತಿನಿಧಿಗಳು ಮತ್ತು ಸ್ನಾತಕೋತ್ತರ / ಸಂಶೋಧನಾ ವಿದ್ಯಾರ್ಥಿಗಳು ಮಂಡಿಸಬಹುದಾಗಿದೆ. ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಕೆಳಕಂಡಂತೆ ನೀಡಲಾಗುವುದು:

  ಪ್ರಥಮ ಬಹುಮಾನ – ರೂ.10,000/-
  ದ್ವಿತೀಯ ಬಹುಮಾನ – ರೂ. 7,500/-
  ತೃತೀಯ ಬಹುಮಾನ –ರೂ. 5,000/-

- ಅಕಾಡೆಮಿಯ ಸದಸ್ಯರು ಮತ್ತು ಕಾಲೇಜಿನ ಪ್ರಾಧ್ಯಾಪಕರುಗಳನ್ನೊಳಗೊಂಡ ತಜ್ಞ ಸಮಿತಿಯು ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಸ್ವಂತಿಕೆ (*originality of research*), ವಸ್ತುನಿಷ್ಠತೆ (*objectivity*), ಉಪಯುಕ್ತತೆ (*utility to society*) ಮತ್ತು ಪ್ರಸ್ತುತಿ (*presentation*) ಇವುಗಳನ್ನು ಆಧರಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಿದೆ.
- ಪ್ರಾತ್ಯಕ್ಷಿಕೆಗಳ ಮೌಲ್ಯಮಾಪಕರಿಗೆ ತಲಾ ರೂ. 2,000/– ಗಳಂತೆ ಗೌರವಧನವನ್ನು ಹಾಗೂ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಅಕಾಡೆಮಿ ವತಿಯಿಂದಲೇ ನೀಡಲಾಗುವುದು

## ೬.0 ವಿಜ್ಞಾನ ಪ್ರಸರಣದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ

- ಈ ಸಮ್ಮೇಳನದಲ್ಲಿ ರಾಜ್ಯದಲ್ಲಿ ವಿಜ್ಞಾನ ಪ್ರಸರಣ ಮತ್ತು ಸಂವಹನಕ್ಕೆ ಅನನ್ಯ ಸೇವೆಯನ್ನು ಸಲ್ಲಿಸಿರುವ ಹಿರಿಯ ವಿಜ್ಞಾನ ಬರಹಗಾರರನ್ನು ಅಕಾಡೆಮಿಯ ಸಭೆಯಲ್ಲಿ ಆಯ್ಕೆ ಮಾಡಿ, ಅವರಿಗೆ

ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಈ ಸಂದರ್ಭದಲ್ಲಿ ಅವರಿಗೆ ರೂ. 50,000/-ಗಳ ನಗದು ಹಾಗೂ ಸನ್ಮಾನ ಪತ್ರವನ್ನು ನೀಡಿ ಗೌರವಿಸಲಾಗುವುದು. ಈ ವೆಚ್ಚವನ್ನು ಅಕಾಡೆಮಿಯಿಂದಲೇ ನೇರವಾಗಿ ಭರಿಸಲಾಗುವುದು.

## 7.0 ಸಮ್ಮೇಳನದ ಆಯೋಜನೆಯಿಂದಾಗುವ ಲಾಭ

- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಾಗುತ್ತಿರುವ ಪ್ರಗತಿಯ ಮುನ್ನೋಟ ಪ್ರತಿನಿಧಿಗಳಗೆ ದೊರೆಯುವುದು
- ಇತ್ತೀಚೆಗೆ ಪ್ರವರ್ಧಮಾನಕ್ಕೆ ಬರುತ್ತಿರುವ ವೈಜ್ಞಾನಿಕ ಕ್ಷೇತ್ರಗಳ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಲು ಸಾಧ್ಯವಾಗುವುದು
- ರಾಜ್ಯದ ಮುನ್ನಡೆಗೆ ರೂಪಿಸಬೇಕಾದ ಯೋಜನೆಗಳು, ಕೈಗೊಳ್ಳಬೇಕಾದ ಸಂಶೋಧನೆಗಳು, ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆ, ಸುಸ್ಥಿರ ಅಭಿವೃದ್ಧಿಗೆ ಆಧುನಿಕ ತಂತ್ರಜ್ಞಾನಗಳ ಉಪಯೋಗ ಮುಂತಾದವುಗಳ ಬಗ್ಗೆ ವಿವಿಧ ಇಲಾಖೆಗಳ ಅಧಿಕಾರಿಗಳಲ್ಲಿ ಹೆಚ್ಚಿನ ತಿಳವಳಿಕೆ ಮೂಡಿಸಲು ಸಹಕಾರಿಯಾಗುವುದು

## 8.0 ಸಮ್ಮೇಳನದ ಖರ್ಚು ವೆಚ್ಚಗಳಿಗೆ ಅನುದಾನ

ಅಕಾಡೆಮಿ ವತಿಯಿಂದ ಸದರಿ ಸಮ್ಮೇಳನಕ್ಕೆ ರೂ. 7.00 ಲಕ್ಷಗಳ ಅನುದಾನವನ್ನು ಮೀಸಲಟ್ಟಿದ್ದು, ಸಮ್ಮೇಳನವನ್ನು ಆಯೋಜಿಸುವ ಸಂಸ್ಥೆಗೆ ಈ ಕೆಳಕಂಡ ಉದ್ದೇಶಗಳಗಾಗಿ ರೂ. 4,25,000/- ಗಳನ್ನು ವೆಚ್ಚ ಮಾಡಲು ಹಣವನ್ನು ಎರಡು ಕಂತುಗಳಲ್ಲಿ ರೂ. 4,00,000/- ಗಳನ್ನು ಬಿಡುಗಡೆ ಮಾಡಲಾಗುವುದು. ಉಳಕೆ ರೂ. 25,000/- ಗಳನ್ನು ಆಯೋಜಕ ಸಂಸ್ಥೆಯು ಉಪಯೋಗತಾ ಪ್ರಮಾಣ ಪತ್ರವನ್ನು ಅಕಾಡೆಮಿಗೆ ಸಲ್ಲಿಸಿದ ನಂತರ ಬಿಡುಗಡೆ ಮಾಡಲಾಗುವುದು.

ಆಯೋಜಕ ಸಂಸ್ಥೆಯ ವೆಚ್ಚದ ಅಂದಾಜು ದರಗಳು ಕೆಳಕಂಡಂತಿವೆ :

| ಕ್ರ. ಸಂ. | ವಿವರ | ಅಂದಾಜು ವೆಚ್ಚ (ರೂ. ಗಳಲ್ಲಿ) |
|---|---|---|
| 1. | *ಸಮ್ಮೇಳನದ ಬ್ರೋಚರ್, ಆಹ್ವಾನ ಪತ್ರಿಕೆ, ಕಾರ್ಯಕಲಾಪದ ವೇಳಾಪಟ್ಟಿ, ಸಾರಾಂಶಗಳ ಹೊತ್ತಿಗೆ ಪ್ರಕಟಣೆ ಇತ್ಯಾದಿ (Brochures, Envelops, Invitations, Session Schedules, ID cards for - VIPs, Guests, Officials, Delegates, Volunteers as well as Banners at entry gates, Main gate, Stage & Public places, Compendium) ಮುದ್ರಣ* | 50,000 |
| | *ಊಟೋಪಚಾರದ ವ್ಯವಸ್ಥೆ (ಬೆಳಗ್ಗೆ ಚಹಾ, ತಿಂಡಿ, ಮಧ್ಯಾಹ್ನದ ಊಟ, ರಾತ್ರಿ ಊಟ ಮತ್ತು ವಿಚಾರ ಗೋಷ್ಠಿಗಳ ಬಿಡುವಿನಲ್ಲಿ ಚಹಾ)* | 2,00,000 |
| | *ಸಮ್ಮೇಳನದ ಕಿಟ್‌ಗಳು (Conference kit- including conference bag, writing pad, pen etc.)* | 1,00,000 |
| | *ಛಾಯಾಚಿತ್ರ ಮತ್ತು ವೀಡಿಯೋ (Photography and Videography)(ಎಲ್ಲಾ ಅಧಿವೇಶನಗಳ ಉಪನ್ಯಾಸಗಳ ಸಂಪೂರ್ಣ ವೀಡಿಯೋ ಚಿತ್ರೀಕರಿಸಿ, ಅಕಾಡೆಮಿಯ ಅಂತರ್ಜಾಲ ತಾಣದಲ್ಲಿ ಹೋಸ್ಟ್ ಮಾಡಲಾಗುವುದು)* | 30,000 |



IQAC, Co-ordinator

Principal